

ಕಡಿಮೆ ತೂಕದ ತುಸಿ ತಂತ್ರಜ್ಞಾನದ ನೆಕ್ಲೇಸ್

## ಮಧ್ಯಮ ವರ್ಗದವರಿಗೆ ಆಸರೆ

‘ಅಕ್ಕನ ಮದುವೆ ಮಾಡಿ ಆರ್ಥಿಕ ಶಕ್ತಿ ಕಳೆದುಕೊಂಡಿದ್ದ ಅಪ್ಪ, ನನ್ನ ಮದುವೆ ನಿಶ್ಚಿತಾರ್ಥವಾದ ಮೇಲೆ ಮಂಕಾಗಿದ್ದ. ಸದಾ ಅಂತರ್ಮುಖಿಯಾಗಿ ಕುಳಿತಿರುತ್ತಿದ್ದ ಅಪ್ಪ ಹೀಗೇಕಾದರು ನನಗೆ ಹೊಳೆಯಲಿಲ್ಲ. ಅಪ್ಪನ ಮಿದುಳಿನ ತಲ್ಲಣ ಅರಿತ ಅಮ್ಮ, ಗುಟ್ಟಾಗಿ ಅಪ್ಪನ ಸಂದಿಗ್ಧವನ್ನು ಹೇಳಿದರು. ದಿನ ಬೆಳಗಾದರೆ ಪತ್ರಿಕೆಯಲ್ಲಿ ‘ಚಿನ್ನದ ದರ ಏರಿಕೆ’, ಚಿನ್ನದ ಬೆಲೆಯ ನಾಗಾಲೋಟ’ ತಲೆಬರಹ ನೋಡಿದಂತೆಲ್ಲ ಅವರ ಎದೆಬಡಿತ ಇನ್ನಷ್ಟು ಜೋರಾಗುತ್ತಿತ್ತು ಎಂದು ಅಮ್ಮ ಹೇಳಿದಾಗಲೇ ನನಗೆ ಅರಿವಾದದ್ದು. ನಾನು ಕೆಲಸಕ್ಕೆ ಸೇರಿ ಆರು ತಿಂಗಳಾಗಿತ್ತು. ಆನ್‌ಲೈನ್ ತಾಣಗಳು, ಪ್ರತಿಷ್ಠಿತ ಆಭರಣದ ಅಂಗಡಿಗಳ ವೆಬ್‌ಸೈಟ್‌ಗಳು ನನ್ನ ನೆರವಿಗೆ ಬಂದವು.

10 ಲಕ್ಷದಲ್ಲಿ ವರನ ಮನೆಯ ಪ್ರತಿಷ್ಠೆಗೆ ತಕ್ಕುದಾದ, ಅಮ್ಮನ ನಿರೀಕ್ಷೆಯಷ್ಟು ಆಭರಣ ಖರೀದಿಸಲು ಸಾಧ್ಯವಾಯಿತು, ಅಪ್ಪನೂ ನಿರಾಳರಾದರು. ಗಂಡಿನ ಕಡೆಯವರು ನಾನು ತೊಟ್ಟಿದ್ದ ಆಭರಣಗಳನ್ನು ಹೊಗಳಿದ್ದೇ ಹೊಗಳಿದ್ದು. ನಿಜಕ್ಕೂ ಲಘು ಒಡವೆ ನಮ್ಮ ಕುಟುಂಬದ ಗೌರವ ಹೆಚ್ಚಿಸಿತು’ ಎಂದು ಇತ್ತೀಚೆಗಷ್ಟೇ ಹಸೆಮಣೆಯೇರಿದ ಎಂಜಿನಿಯರ್ ಪ್ರತೀಕ್ಷಾ ಅನುಭವ ಹಂಚಿಕೊಂಡರು.

## ಆಪತ್ತಿನಿಂದ ಪ್ರತಿಷ್ಠೆಗೆ

ದಶಕಗಳ ಹಿಂದೆ ಬಂಗಾರದ ಕೂಡಿಡುವಿಕೆ ಆಪತ್ತಿನ ನಿಧಿಯಾಗಿತ್ತು. ಅನಾರೋಗ್ಯ, ವಿವಾಹ ಮೊದಲಾದ ತುರ್ತು ಆರ್ಥಿಕ ಅಡಚಣೆಗೆ ಅಡವಿಟ್ಟು ಹಣ ತರುವ ಆಪದ್ಬಾಂಧವನಂತಿತ್ತು. ಈಗ ಒಡವೆಗಳು ಸಾಮಾಜಿಕ ಪ್ರತಿಷ್ಠೆಯ ಪ್ರತಿರೂಪವಾಗಿವೆ.

ಚಿನ್ನ ತುಟ್ಟಿಯಾಗುತ್ತಿದೆ, ಲೋಹದ ಮೋಹ ಹೆಚ್ಚುತ್ತಿದೆ. ಒಡವೆ ಧರಿಸುವುದು ಪ್ರತಿಷ್ಠೆಯ ವಿಷಯವಾಗಿ ರೂಪುಗೊಂಡ ಮೇಲೆ ಹೆಣ್ಣು ಮಕ್ಕಳು ಮಾತ್ರವಲ್ಲ, ಪುರುಷರೂ ಆಭರಣಗಳತ್ತ ಆಕರ್ಷಿತರಾಗಿದ್ದಾರೆ. ಒಂದೇ ಬೆರಳಿಗೆ ಉಂಗುರ, ಒಂದು ಬೆರಳಿಗೆ ಒಂದೇ ಉಂಗುರವೆಂಬುದು ಈಗ ಹಳೆ ಸ್ಟೈಲ್! ಒಂದು ಬೆರಳಿಗೆ 2–3 ಉಂಗುರ, ಬ್ರೇಸ್ಲೆಟ್, ಕತ್ತಿಗೆ ಚೈನು ಧರಿಸುವುದು ಲೇಟೆಸ್ಟ್ ಸ್ಟೈಲ್! ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯೂನಿಸೆಕ್ಸ್ ಕಲ್ಪನೆಯ, ಮಹಿಳೆ ಮತ್ತು ಪುರುಷರೂ ಧರಿಸಬಹುದಾದ ಹಾರಗಳು ಕಣ್ಣುಕೋರೈಸುತ್ತಿವೆ.



ನೋಟದಲ್ಲೇ ಕಣ್ಸೆಳೆಯುವ ಹೂವಿನಷ್ಟೇ ಹಗುರಾದ ನೆಕ್ಲೇಸ್

ತಯಾರಿಕೆಯಲ್ಲಿ 30 ಗ್ರಾಂ ತೂಗುವ ನೆಕ್ಲೇಸ್‌ಗಳು ತುಸಿ ತಂತ್ರಜ್ಞಾನದಲ್ಲಿ 6–7 ಗ್ರಾಂ ಬಂಗಾರದಲ್ಲಿ ಸಿದ್ಧವಾಗುತ್ತವೆ. ಮೊದಲು 80 ಗ್ರಾಂ, 100 ಗ್ರಾಂಗಳ ಭಾರದ ಉದ್ದದ ಟೆಂಪಲ್ ಡಿಸೈನ್ ಒಡವೆಗಳು ಈಗ 20 ಗ್ರಾಂ ತೂಕದಲ್ಲಿ ದೊರೆಯುತ್ತವೆ. ಭರ್ಜರಿಯಾಗಿ ಕಾಣುವ ಉಂಗುರ ₹15 ಸಾವಿರಕ್ಕೆಲ್ಲ ಲಭ್ಯವಾಗುತ್ತದೆ. ಸಾಂಪ್ರದಾಯಿಕ ದಿರಿಸಿನ ಪಾರ್ಟಿಗಳು, ಮದುವೆ, ವಿಶೇಷ ಸಮಾರಂಭಗಳಲ್ಲಿ ಇವು ಮಧ್ಯಮ ವರ್ಗದ ಹೆಣ್ಣು ಮಕ್ಕಳ ಕೀಳರಿಮೆಯನ್ನು ಕಳೆದು, ಖುಷಿಯನ್ನು ಇಮ್ಮಡಿಸುತ್ತವೆ ಎನ್ನುತ್ತಾರೆ ಆಭರಣ ತಯಾರಕರು.

ಬಣ್ಣದ ಬೀಡಿನ ಸರಗಳು, ಅದಕ್ಕೆ ಹೊಂದುವ ದೇವರ ಚಿತ್ತಾರದ ದೊಡ್ಡ ಪೆಂಡೆಂಟ್‌ಗಳು ಸಹ ಟ್ರೆಂಡಿಂಗ್‌ನಲ್ಲಿವೆ. ಇತ್ತೀಚೆಗೆ ಹಸೆಮಣೆಯೇರಿದ ನಿರೂಪಕಿ ಅನುಶ್ರೀ ಮದುವೆ ಸಂದರ್ಭದಲ್ಲಿ ಹಸಿರು ಬೀಡಿನ ಹಾರ ತೊಟ್ಟು ಮಿಂಚಿದ್ದ ರೀಲ್ ಭಾರಿ ಸದ್ದು ಮಾಡಿತ್ತು.

ಕಿವಿಯೋಲೆಗಳಲ್ಲಿ ಟೆಂಪಲ್ ಸ್ಟೈಲ್,



ಇದು ನಕಲಿಯಲ್ಲ, ಅಸಲಿ ಆಭರಣ



ಟೆಂಪಲ್ ಮಾದರಿಯ ಲಘು ಒಡವೆ

ಬಳೆಗಳಲ್ಲಿ ನಕಾಶಿ ಕಡಾ ಜನಪ್ರಿಯತೆ ಪಡೆದಿವೆ. ಹಿಂದೆ ಈ ಬಳೆಗಳನ್ನು ಇಷ್ಟಪಡುವವರು ಕಷ್ಟಪಟ್ಟು ತಯಾರಿಕಾ ವೆಚ್ಚ (ಮೇಕಿಂಗ್ ಚಾರ್ಜ್) ಭರಿಸುತ್ತಿದ್ದರು. ಶೇ 30–35 ವೇಸ್ಟೇಜ್ ಇರುತ್ತಿತ್ತು. ಈಗ ಡೈಸ್‌ಗಳ ಮೂಲಕ ನಕಾಶಿ ಕಡಾ ಸಿದ್ಧವಾಗುತ್ತವೆ. ವೇಸ್ಟೇಜ್ ಪ್ರಮಾಣ ಮತ್ತು ಗ್ರಾಹಕರ ಕಿಸೆಯ ಭಾರ ಎರಡೂ ತಗ್ಗಿದೆ.

ಇಂದಿನ ಯುವತಿಯರು ಟ್ರೆಂಡಿಂಗ್ ಅನುಸರಿಸುವ ಜಮಾನದವರು. ಉಡುಪಿಗೆ ಹೊಂದುವ ಆಭರಣಗಳನ್ನು ಧರಿಸುವ ಫ್ಯಾಷನ್ ಬಂದ ಮೇಲೆ, ಬಂಗಾರದ ಜಗತ್ತು ಇನ್ನಷ್ಟು ಹೊಳಪಾಗಿದೆ.

ಶುದ್ಧ ಬಂಗಾರದಲ್ಲಿ ಕಡಿಮೆ ಕ್ರಯದಲ್ಲಿ ಒಡವೆ ತಯಾರಿಸಬಹುದಾದ ಎಲೆಕ್ಟ್ರೊಫಾರ್ಮಿಂಗ್ ತಂತ್ರಜ್ಞಾನ ಇನ್ನಷ್ಟು ಪ್ರಚಾರ ಪಡೆದರೆ, ಯುವತಿಯರ ಬಹು ಆಯ್ಕೆಯ ಒಡವೆಗಳ ಕನಸು ಇನ್ನಷ್ಟು ಹತ್ತಿರವಾಗಬಹುದು.